ಗವಾನಕ್ಕೆ ಈ ವಿಷಯವನ್ನು ತಂದರೂ ಸಹ ರಿಪೇರಿ ಕಾರ್ಯವನ್ನು ಕೈಗೊಂಡಿಲ್ಲ. ಆದ್ದರಿಂದ ಈ ರಸ್ತೆಯ ರಿಪೇರಿ ಕಾರ್ಯವನ್ನು ತಕ್ಷಣ ಕೈಗೊಂಡು ಈ ರಸ್ತೆಗಳಿಗೆ ಟಾರು ಹಾಕಿಸಿಕೊಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ. ಈ ರಸ್ತೆಗಳ ದುಸ್ಥಿತಿಯನ್ನು ಇಲಾಖೆ, ಸೂಪರಿಂಟೆಂಡಿಂಗ್ ಇಂಜಿನಿಯರ್ ಮೊದಲಾದವರೇ ಅಲ್ಲದೆ ರಾಜ್ಯದ ಸಚಿವರುಗಳಿಗೂ ಸಹ ತೋರಿಸಲಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರ ತರಿಸಿಕೊಡುತ್ತೇನೆ.

೨೨. ಜಿಲ್ಲಾ ಪರಿಷತ್ತಿನ ಅಸ್ತಿತ್ವದಿಂದಾಗಿ ವಿಧಾನಸಭೆಯ ಅಧಿಕಾರ ಮತ್ತು ರಚನೆಯಲ್ಲಿ ಬದಲಾವಣೆಗೆ ಮನವಿ

ಶ್ರೀ ಜಿ. ರಾಜೂಗೌಡ (ಹನೂರು)—ಮಾನ್ಯ ಅಧ್ಯಕ್ಷರೆ, ಅಧಿಕಾರ ವಿಕೇಂದ್ರೀಕರಣದ ಪ್ರಥಮ ಪ್ರಯತ್ನವಾಗಿ ಪುನರ್‌ಜನ್ಮ ತಾಳಿರುವ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳು ರಾಜ್ಯದಲ್ಲಿ ಅಮೋಘವಾದ ಸೇವೆ ಸಲ್ಲಿಸುತ್ತಾ ಉತ್ತಮವಾದ ಆಡಳಿತದಲ್ಲಿ ತಮ್ಮದೇ ಆದ ದಾಖಲೆಗಳನ್ನು ನಿರ್ಮಿಸಿ ರಾಜ್ಯದ ಎಲ್ಲಾ ವರ್ಗದ ಜನಗಳ ಪ್ರೀತಿಗೆ ಪಾತ್ರವಾಗಿವೆ. ಇವುಗಳ ಆಡಳಿತದಿಂದ ಉತ್ತಮ ಫಲಿತಾಂಶ ದೊರಕಿದ್ದುದರಿಂದ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಆಡಳಿತದ ವ್ಯಾಪ್ತಿಗೆ ಕಂದಾಯ ಇಲಾಖೆ ಪೋಲೀಸ್ ಇಲಾಖೆ, ಸಹಕಾರ ಇಲಾಖೆ, ಸಣ್ಣ ನೀರಾವರಿ ಮಧ್ಯಮ ಹಾಗೂ ಭಾರಿ ನೀರಾವರಿ ಇಲಾಖೆ, ಅರಣ್ಯ ಇಲಾಖೆ, ಸಂಪರ್ಕ ಸಾರಿಗೆ, ರೇಷ್ಮೆ ಜೈಲು ಇವೇ ಮೊದಲಾದ ಎಲ್ಲಾ ಇಲಾಖೆಗಳನ್ನು ವಹಿಸಿ ದೈನಂದಿನ ಜನಗಳ ಕೆಲಸಕ್ಕೆ ಮನೆ ಬಾಗಿಲಲ್ಲೇ ಪರಿಹಾರ ದೊರೆಯುವಂತೆ ಮಾಡಬೇಕು.

ಈಗಿರುವ ಪದ್ಧತಿಯಲ್ಲಿ ಜಿಲ್ಲಾಮಟ್ಟದಲ್ಲಿ ಒಂದು ಸರ್ಕಾರ ಮತ್ತು ರಾಜ್ಯ ಮಟ್ಟದಲ್ಲಿ ಒಂದು ಸರ್ಕಾರ ಇರುವುದರಿಂದ ರಾಜ್ಯದ ಪ್ರಗತಿಗೆ ಕಂಟಕವಾಗುತ್ತದೆ. ಸಮಾನಾಂತರಸರ್ಕಾರ (ಪ್ಯಾರಲಲ್ ಗೌರ್ನಮೆಂಟ್) ಇರುವುದು ಬೇಡ. ಸಮಾನಾಂತರ ಸರ್ಕಾರದ ಕೆಲಸ ಮಾಡುವುದರಿಂದ ಅಧಿಕಾರ ವಿಕೇಂದ್ರೀಕರಣದಿಂದ ಜನ್ಮ ತಾಳಿರುವ ಸಂಸ್ಥೆಗಳಾದ ಜಿಲ್ಲಾ ಪರಿಷತ್ತು ಮಂಡಲ ಪಂಚಾಯಿತಿಗಳಿಗೆ ಅಪಪ್ರಚಾರ ಮಾಡಿದಂತಾಗುತ್ತದೆ. ಮೂಲತಃ ಈ ಸಂಸ್ಥೆಗಳನ್ನು ಪ್ರಜಾಸತ್ತಾತ್ಮಕ ರೀತಿಯಲ್ಲಿ ಬಲಪಡಿಸಲು ಜಿಲ್ಲಾ ಪರಿಷತ್ತಿಗೆ ಮಂಡಲ ಪಂಚಾಯಿತಿಗಳಿಗೆ, ಪುರಸಭೆಗಳಿಗೆ, ನಗರಸಭೆಗಳಿಗೆ, ಮಹಾನಗರ ಪಾಲಿಕೆಗಳಿಗೆ ಚುನಾಯಿತರಾಗಿರುವ ಸದಸ್ಯರುಗಳ ಮತದ ಆಧಾರದ ಮೇಲೆ ರಾಜ್ಯ ವಿಧಾನಸಭೆಯನ್ನು ರಚಿಸುವಂತೆ ಸಂವಿಧಾನವನ್ನು ಮಾರ್ಪಾಡು ಮಾಡಬೇಕು. ವಿಧಾನ ಪರಿಷತ್ತನ್ನು ರದ್ದುಪಡಿಸಬೇಕು. ಕಾನೂನು ರಚನೆ ಮಾಡುವುದಕ್ಕೆ ಮತ್ತು ಕಾನೂನುಗಳನ್ನು ತಿದ್ದುಪಡಿ ಮಾಡುವುದಕ್ಕೆ ಮಾತ್ರ ರಾಜ್ಯ ಮಟ್ಟದಲ್ಲಿ ವಿಧಾನಸಭೆ ಬೇಕಾಗಿರುವುದರಿಂದ ಇಡೀ ರಾಜ್ಯಕ್ಕೆಲ್ಲಾ ಕೇವಲ ೩೦ ಸ್ಥಾನಗಳನ್ನು ನಿಗದಿಗೊಳಿಸಿ ಕಾನೂನು ಪರಿಣತರನ್ನು ಮೇಲೆ ತಿಳಿಸಿರುವ ಸ್ಥಳೀಯ ಸಂಸ್ಥೆಗಳಲ್ಲಿ ಚುನಾಯಿತರಾಗಿರುವ ಸದಸ್ಯರ ಮತಪಟ್ಟಿಯನ್ನು ತಯಾರು ಮಾಡಿ ಚುನಾವಣೆ ನಡೆಸತಕ್ಕದ್ದು. ಆದ್ದರಿಂದ ಈ ಮಾನ್ಯ ಸಭೆಯನ್ನು ವಿಸರ್ಜನೆ ಮಾಡಿ ಸರ್ಕಾರಕ್ಕೆ ತಗಲುವ ಸಾರ್ವತ್ರಿಕ ಚುನಾವಣೆಯ ವೆಚ್ಚ, ೨೨೫ ಜನ ಮಾನ್ಯ ಸದಸ್ಯರಿಗೆ ಕೊಡತಕ್ಕ ಸಂಭಾವನಾ ವೆಚ್ಚವನ್ನು ತಗ್ಗಿಸಿ ಈ ರಾಜ್ಯದಲ್ಲಿ ಪ್ರಜಾಸತ್ತಾತ್ಮಕವಾದ ಬೇರು ಬಲವಾಗಿ ಬೇರೂರುವಂತೆ ಮಾಡಬಹುದು. ಈ ರೀತಿ ಮಾಡದೆ ಹಳೆಯ ಪದ್ಧತಿಯಂತೆ ಚುನಾವಣೆ ನಡೆಸಿದರೆ ಚುನಾಯಿತ ವಿಧಾನಸಭೆಯು ನಿರ್ಜೀವ ಸಂಸ್ಥೆಯಾಗಿ ರಾಜ್ಯಕ್ಕೆ ಇದು ಬೆಳೆ ಆನೆಯಾದಂತಾಗುತ್ತದೆ. ಈ ಬಗ್ಗೆ ಸರ್ಕಾರದ ಪ್ರತಿಕ್ರಿಯೆಯನ್ನು ಈ ಸದನದಲ್ಲಿ ಕೇಳಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ವಿಚಾರ ಸರ್ಕಾರದ ಮುಂದೆ ಈಗಿಲ್ಲ.